ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 685
ವಿಧಾನ ಪರಿಷತ್ತಿನ ಸದಸ್ಯರು	: ಶ್ರೀ ಬಿ.ಜಿ.ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	: 25.09.2020
ವಿಷಯ	: ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೈನುಗಾರಿಕೆ ಉತ್ತೇಜಿಸುವ ಬಗ್ಗೆ.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಮುಂದಾಗುವುದೇ;	ಹೌದು
ಆ)	ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಮಗ್ರ ಮಾಹಿತಿ ನೀಡುವುದು)	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:- 1. ಸರ್ಕಾರದ ವತಿಯಿಂದ ರೂ.5/-ರಂತೆ ಹಾಲಿಗೆ ಪ್ರೋತ್ಸಾಹ ಧನವನ್ನು ಡಿಸೆಂಬರ್-2016ರ ಮಾಹೆಯಿಂದ ಹಾಲು ಉತ್ಪಾದಕರಿಗೆ ನೀಡಲಾಗುತ್ತಿದೆ. 2. [illegible] ಅಭಿವೃದ್ಧಿಗಾಗಿ ಒಕ್ಕೂಟದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 3. ಮೂಲಭೂತ ಸೌಲಭ್ಯಗಳನ್ನು ಸರ್ಕಾರದ ಯೋಜನೆ ಅಡಿಯಲ್ಲಿ ಅಳವಡಿಸಲಾಗಿದೆ. 4. ರಾಸುಗಳ ಉತ್ಪಾದಕತೆಯನ್ನು ಅಧಿಕಗೊಳಿಸುವ ನಿಟ್ಟಿನಲ್ಲಿ ಉತ್ಕೃಷ್ಟ ಗುಣಮಟ್ಟದ ವೀರ್ಯನಳಿಕೆಯನ್ನು ಬಳಸಿ ಕೃತಕ ಗರ್ಭಧಾರಣೆಯನ್ನು ಮಾಡಲಾಗುವುದು.
ಇ)	ಈ ಎರಡು ಜಿಲ್ಲೆಗಳಲ್ಲಿ ಹಾಲಿನ ಬೇಡಿಕೆ ಎಷ್ಟು, ಈಗ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)	ಈ ಎರಡು ಜಿಲ್ಲೆಗಳಲ್ಲಿ ಹಾಲಿನ ಬೇಡಿಕೆ ಹಾಗೂ ಉತ್ಪಾದನೆ ವಿವರ ಈ ಕೆಳಕಂಡಂತಿದೆ:- (ಕೆಳಗಿನ ಕೋಷ್ಟಕ)
ಈ)	ಹಾಲಿನ ಕೊರತೆಯಾಗುತ್ತಿದ್ದಲ್ಲಿ ಪರ್ಯಾಯ ಮಾರ್ಗಗಳೇನು? (ವಿವರ ನೀಡುವುದು)	ಹೌದು. ಕೊರತೆಯನ್ನು ನೀಗಿಸಲು ಬೇರೆ ಒಕ್ಕೂಟಗಳಿಂದ ಹಾಲು ಪಡೆದು, ಪ್ಯಾಕಿಂಗ್ ಮಾಡಿ ವಿತರಣೆ ಮಾಡಲಾಗುತ್ತಿದೆ.

ಜಿಲ್ಲೆ	ಕ್ರ.ಸಂ.	ತಾಲ್ಲೂಕು	ಉತ್ಪಾದನೆ ಪ್ರಮಾಣ	ಬೇಡಿಕೆ ಪ್ರಮಾಣ
ಕಲಬುರಗಿ	1	ಅಫಜಲಪುರ	6118	3300
	2	ಆಳಂದ	41958	4730
	3	ಚಿಂಚೋಳಿ	3061	2530
	4	ಚಿತ್ತಾಪುರ	1310	13805
	5	ಕಲಬುರಗಿ	33215	58740
	6	ಜೇವರ್ಗಿ	436	3500
	7	ಸೇಡಂ	1310	4565
		ಒಟ್ಟು	87408	91170
ಯಾದಗಿರಿ	1	ಶಹಾಪುರ	7840	9012
	2	ಶೋರಾಪುರ	13938	6745
	3	ಯಾದಗಿರಿ	7259	17377
		ಒಟ್ಟು	29037	33134

ಪಸಂಮೀ ಇ-42 ಕಹಾಮ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು